ISSN: 2347-2723 IMPACT FACTOR : 2.0260(UIF)

REVIEW OF LITERATURE

VOLUME - 4 | ISSUE - 11 | JUNE - 2017

# ಯು.ಆರ್. ಅನಂತ ಮೂರ್ತಿಯವರ ಪಾಡು, ಈಶಯ್ಯೊ, ಪ್ರೀತಿ, ಕಲಿಯಬೇಕಿನ್ನು, ಮೊದಲಸಲವಲ್ಲ, ಪಂಚ ಕವನಗಳ ವಿಮರ್ಶೆ



**ಡಾ. ಶಿವಗಂಗಾ ಯು. ಬಿಲಗುಂದಿ**
ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

ಅನಂತಮೂರ್ತಿಯವರ ಏನೇ ಹೇಳಲು ಹೊರಟರು ಅದಕ್ಕೆ ಒಂದರ್ಥ ವಿರುತ್ತದೆ. ಅವರ ಕವನಗಳಲ್ಲಿ ಸಲಹೆ ಸೂಚನೆಯಿರುತ್ತದೆ. ತಾವು ಪಾಲಿಸಲೇ ಬೇಕು ಎಂದು ಕಟ್ಟಳೆ ಹೆರಿದವರಲ್ಲ ಅದು ತಮ್ಮ ಇಷ್ಟ ಎನ್ನುವ ಉದಾರ ಮನೋಭಾವ ಹೊಂದಿದವರು. ಹೀಗಾಗಿಯೆ ಇವರ ಕವನವಾಗಲಿ ಕಾದಂಬರಿಯಾಗಲಿ ಯಾವೊಂದು ಜನಾಂಗಕ್ಕೆ ಸಿಮೀತವಿಲ್ಲ. ಜಾತಿಯ ಎಲ್ಲೆಯನ್ನು ಮೀರಿ ನಿಲ್ಲುವಂಥಗಳಾಗಿವೆ. ಯಾವುದೇ ಜಾತಿ ಮೇಲಲ್ಲ, ಕೀಳಲ್ಲ ಎಲ್ಲರು ಸಮಾನರು ಎನ್ನುವ ವಿಶ್ವ ಧರ್ಮವನ್ನೇ ಬೋಧಿಸುವ ಇವರ ಕಾವ್ಯಶೈಲಿ ಅಚ್ಚುಮೆಚ್ಚು ಅದೇ ರೀತಿ ಕಲಿಯಬೇಕಿನ್ನು ಕವನದಲ್ಲಿ ನೋಡಬಹುದುದಾಗಿದೆ.

“ವಸ್ತುಗಳನ್ನು ಕಣ್ಣಿಗೆಬ್ಬಿಸಿ ಕೊಡುವ
ಆಕಾಶದುದ್ದಗಲ ಚೆಲ್ಲುವ
ತರದಲ್ಲೆಲ್ಲ ವಿನಯಶೀಲ ನೇರಳಾಗಿ ತಂಗುವ
ಬೆಳಕಿನ ಅವಲಂಬನವನ್ನು
ನಿರಂಬಳವನ್ನು
………………………………………………
………………………………………………
ಮರದಂತೆ ಸುಮ್ಮನಿರುವುದನ್ನೊ
ಎದುರುವುದನ್ನೊ
ತಾಳುವುದನ್ನೊ”[1]

ನಾವು ಪರಿಸರ ಪ್ರಕೃತಿಯಿಂದ ಕಲಿಯಬೇಕಾದುದ್ದು ಬಹಳವಿದೆ. ಗಾಳಿಯಹಾಗೆ ನಿರಂವಯಿಯಾಗಿ ಅಲೆಯುವ ಪರಾವಲಂಬಿ ಯಾಗಿರದೆ, ಸ್ವಾವಲಂಬಿಯಾಗಿ ಬಾಳುವುದು ಮನುಷ್ಯ ಅಳವಡಿಸಿಕೊಳ್ಳಬೇಕು ಎನ್ನುತ್ತಾರೆ. ಬೆಳಕಿನಂತೆ ನಿರವ್ವಳಾಗಿ ಹರಿಯುವುದನ್ನು ಮನುಷ್ಯನಾದವನು ಅಳವಡಿಸಿಕೊಳ್ಳಬೇಕೆಂದು ಹೇಳುತ್ತಾರೆ. ಅವಲಂಬನವಿಲ್ಲದ ಬೆಳಕು ಹೇಗೆ ಸ್ವತಂತ್ರವಾಗಿದಿಯೋ ಹಗೆ ಮನುಷ್ಯನ ಬದುಕು ಸ್ವತಂತ್ರವಾಗಿರಬೆಕು ಎನ್ನುತ್ತಾನೆ. ಬೆಂಕಿಯ ಹಾಗೆ ನಿರ್ಧಯತೆಗುಣವನ್ನು ತಾಳಬಾರದು ಅದರ ಹಠದಂತೆ ನಡೆಯಬಾರದೆಂದು ಹೇಳುತ್ತಾರೆ.

ಮರದಂತೆ ಸುಮ್ಮನಿರಬೇಕು ಶಾಂತವಾಗಿರಬೇಕು. ಕಷ್ಟಸುಖಕ್ಕೆ ಹೆದರದೆ ಅಂಜದೆ ಅಳುಕದೆ ಶಾಂತ ಸ್ವಭಾವವಾಗಿರಬೇಕೆಂದು ಹೇಳುತ್ತಾರೆ. ಮರ ತನ್ನ ಎಲೆಗಳು ಉದುರಿದರು ಅದು ಶಾಂತವಾಗಿಯೇ ಇರುತ್ತದೆ. ಹಾಗೆಯೇ ಮುನಷ್ಯನಾದವನು ಸಹ ಶಾಂತತೆಯನ್ನು ಕಾಪಾಡಿಕೊಳ್ಳಬೇಕು ಎನ್ನುತ್ತಾರೆ.

“ಬಳಬರಲು ಕಾದಿದ್ದು
ಬಂದ ಪುಳಕ್ಕಕೆ

ಚಿಗುರುವುದನ್ನು"

ಸುಖಬಂದಾಗ ಹಿಗ್ಗದೆ ಶಾಂತವಾಗಿರಬೇಕು ಎಲೆ ಉದುರುವಾಗ ಶಾಂತವಾಗಿದ್ದವರ ಮೇಲೆ ಚಿಗುರುವಾಗಲೂ ಅದು ಶಾಂತವಾಗಿಯೇ ಇರುತ್ತದೆ. ಹಾಗೆ ಮನುಷ್ಯನಾದವನು ಹಿಗ್ಗದೆ, ಕುಗ್ಗದೆ, ಶಾಂತವಾಗಿರಬೇಕೆಂದು ಹೇಳುತ್ತಾರೆ.

"ಮೊದಲು ಸಲವಲ್ಲ
ಈ ಮಿನುಗುವುದು ಈ ತೆರೆಯಾವುದು,
ಈ ಹನಿಯಾಗುವುದು
ಮೊದಲ ಸಲವಲ್ಲ
ಒಂದು ಚಿಗುರಿತ್ತೆಂದು ಹತ್ತು ಬಿತ್ತುವುದು"[೩]

ಕವಿಯ ಯಾವುದಾದರು ಒಳ್ಳೆಯದಾಯಿತ್ತೆಂದರೆ ಅದಕ್ಕೆ ಬೆನ್ನು ಬಿಳಬಾರದು, ಎಲ್ಲವೂ ಶಾಂತ ಚಿತ್ತದಿಂದಲೇ ಇರಬೇಕು ಎಂದು ತಿಳಿಸುತ್ತಾರೆ. ಯಾವುದು ಮೊದಲಸಲವಲ್ಲ, ಎಲ್ಲವು ಪ್ರಕೃತಿ ನಿಯಮ ದಂತೆ ನಡೆಯುತ್ತದೆ. ಹೂ ಅರಳುವುದು, ಮಿನುಗುವುದು, ಅದರ ಪೂಕಳೆ ತೆರೆದು ಕೊಳ್ಳುವುದು ಅದರ ಸುವ್ವಾಸನೆ ಬಿರುವುದು ಮೊದಲಸಲವಲ್ಲ ಅದು ಎಂದು ಯಾವತ್ತೊ ಪ್ರಕೃತಿಯಲ್ಲಿ ನಡೆಯುವ ಕ್ರಿಯೆಗಳು ಎನ್ನುತ್ತಾರೆ.

"ತೊಡೆಯ ಮೇಲೊಬ್ಬಳು
ಹೃದಯದಲ್ಲೊಬ್ಬಳು
ಹೃದಯದಲ್ಲಿರುವವಳೂ ತೊಡೆಮೇಲೆ ಬರಳು
ತೊಡೆಮೇಲೆ ಕೂತವಳೂಹೃದಯ ಹೊಗಳು"

ಪ್ರೀತಿಸಿದ ಹುಡುಗಿ ಹೃದಯದಲ್ಲಿರುವಳು ಅವಳ ಕೈಕೊಟ್ಟು ಕಾಟಚಾರಕ್ಕೆ ಮದುವೆಯಾದ ಹೆಂಡತಿ. ಆ ಸ್ಥಾನವನ್ನು ಅಲಂಕರಿಸಲಾರಳು. ಕೇವಲ ತೊಡೆಮೇಲೆ ಕುಳಿತುಕೊಳ್ಳಬಹುದು ಆದರೆ ಹೃದಯದಲ್ಲಿ ಹೋಗುವುದು ಸಾಧ್ಯವಿಲ್ಲ ಎನ್ನುವ ವಾಸ್ತವ ಸತ್ಯವನ್ನು ಹೇಳುತ್ತಾರೆ. ಆದರೆ ತೊಡೆಯ ಮೇಲೆ ಇದ್ದವಲು ಗಂಡನ ಹೃದಯ ಗೆದಿಯ ಬೇಕೆಂದು ಪರಿಪರಿಯಾಗಿ ಹಂಬಲಿಸಿ ಸರ್ವ ಪ್ರಯತ್ನಮಾಡಿ ಸೋಲುತ್ತಾಳೆ ಮತ್ತು ಬಾಡಿ ಸುಣ್ಣವಾಗುತ್ತಾಳೆ.

"ಹೃದಯದಲ್ಲಿರುವವಳು ಒಂದಲ್ಲ ಒಂದುದಿನ
ಬರಿದಾದ ತೊಡೆನಂಬಿ ಏರುವವಳೆ
ತಾನೂನೂ ಬಾಡುವವಳೇ
ಆಗ
ತೊಡೆಮೇಲೆ ಇವಳಿರಲು ಹೃದಯಕ್ಕೆ ಹಂಬಲಿಸಿ
ಒಳಗೆ ಮೊಗ್ಗಾಗುವುದು ಇನ್ನೊಬ್ಬಳು"[೪]

ಸಂಗಾತಿ ಗಂಡನ ಹೃದಯಗೆದ್ದು ಮನದರಸಿಯಾಗಬೇಕೆಂದು ಪರಿಪರಿಯ ಪ್ರಯತ್ನಮಾಡುತ್ತಾಳೆ. ಅದು ಕೊನೆಗೆ ಅದು ಸಾಧ್ಯವಾಗದೆ ಹೋದಾಗ ನೊಂದುಕೊಳ್ಳುತ್ತಾಳೆ. ಕೊನೆಗೆ ಗಂಡನಿಂದ ಸುಖಪಟ್ಟು ಸುಮ್ಮನಾಗುತ್ತಾಳೆ. ಇದು ಕೊನೆಯವರೆಗೂ ಸಾಧ್ಯವಾಗುವುದಿಲ್ಲ ಎನ್ನುತ್ತಾನೆ ಕವಿ.

ಪ್ರಾಣದ ಗೆಳತಿಯನ್ನು ಕುರಿತು ಕೇಳುತ್ತಾನೆ
"ಈ ಶಯ್ಯಾ ನಮ್ಮನ್ನು ಸವರ್ಗ ಕೊಟ್ಟರೇ ಒಯ್ಯುವುದು
ಒಮ್ಮೊಮ್ಮೆ ಮಾತ್ರ
ಒಂದೊ ನಿನ್ನ ಅಥವಾ ನನ್ನ
ತೀರದ ತುರಿಕೆ ಹಲವು ಸಲ ಕಾಡುವುದು
ಪಿಂಡವನ್ನೂ ಅಲ್ಲ, ಬೀಜವನ್ನುಅಲ್ಲ
ನಮ್ಮ ಕಸರತ್ತಲ್ಲ ಗರ್ಭಕುಲ್ಲಾಸ"[೫]

ಈ ಶಯ್ಯೋ ನಮ್ಮನ್ನು ಸರ್ವರ್ಗಕ್ಕೆ ಕರೆದು ಕೊಂಡುಹೋಗುವುದೇ ಎಂದು ಕೇಳುತ್ತಾನೆ. ಒಂದುದಿನ ನಿನ್ನಾದರು ಅಥವಾ ನಾನದರು ಸ್ವರ್ಗಕ್ಕೆ ಹೊಗುವುದು ಖಂಡಿತ ಎನ್ನುತ್ತಾನೆ ಕವಿ

"ಕೊನೆಯ ಧರ್ಮ ಬೀರು, ಸ್ವಯಾಮಾಚಾರ್ಯ ದೈವಜ್ಞನ
ದಿನಚರಿ, ಜಪದಸರ, ಪತಿ, ಪೆನ್ನು ದೀಪ ಓಕ್ ಮರದ ಮೇಜು
ಇವೆ ಮ್ಯೂಸಿಯಂನಲ್ಲಿ
ಮತ್ತೊಬ್ಬ ಹುಟ್ಟಿಲ್ಲ ಇವನೆ ಕೊನೆ
ಎನ್ನುತ್ತದೆ ಸ್ಲೈಡ್ ಶೋ ಮೃದು ಸ್ವರದಲಿ"[೬]

ಸಾಧಕರನ್ನು ಮ್ಯೂಜಿಯಂನಲ್ಲಿಟ್ಟು ಅವರನು ಗೌರವಿಸುತ್ತೇವೆ ಇಂಥಹ ಆಚಾರ್ಯ ಹುಟ್ಟಲ್ಲ ಇವರೇ ಕೊನೆಯ ಎಂದು ಹೇಳುತ್ತವೆ. ಆದರೆ ಯುಗಕ್ಕೆ ಒಬ್ಬರಂತೆ ಅಂಥಹ ವ್ಯಕ್ತಿಗಳ ಹುಟ್ಟಿಬರುತ್ತಾರೆ. ಎನ್ನುತ್ತಾರೆ.

"ನೂರಕ್ಕೂ ಹೆಚ್ಚು ವರ್ಷದ ಹಿಂದೆ ಜರ್ಮನಿಯಿಂದ ಇವರು
ಬಂಡಾಯ ಎದ್ದು ಬಂದದ್ದು
ಸರಳತೆಗಾಗಿ, ಭಗವಂತನ ಜೊತೆ ನೇರ ಸಂಪರ್ಕಕ್ಕಾಗಿ,
ಚರ್ಚಿನ ಡಂಬಾಚಾರದ ಶತ್ರುಗಳಾಗಿ, ಸತ್‌ಸಂಗದಲ್ಲಿ
ಕೂಡಿ ಬಂಡು, ಕೋಡಿ ಬದುಕಿ,ಕೂಡಿ ದುಡಿದು
ಕೊನೆಯಲ್ಲಿ ಅವನ್ನನು ಕೂಡಲಾಗಿ"[೭]

ಶತಮಾನದ ಹಿಂದೆ ಜರ್ಮನಿ ದೇಶದವರು ದಂಗೆ ಎದ್ದಿರುವುದು ಸರಳತೆಗಾಗಿ ಶಾಂತಿಗಾಗಿ ಭಗವಂತನ ಕರುಣೆಗಾಗಿ ಎನ್ನುತ್ತಾರೆ. ಚರ್ಚಿನ ಡಂಬಾಚಾರದ ಶತ್ರುಗಳನ್ನುದೂರ ಸರಿಸುವುದಕ್ಕಾಗಿ ಅವರನ್ನು ನಾಶಮಾಡುವುದಕ್ಕಾಗಿ. ಶತ್ರುಗಳನ್ನು ದ್ವೇಶಿಸಿ ಕೊನೆಗೆ ಅವರ ಜೊತೆ ಒಂದಾಗಿ ಬಾಳುವುದು ಎಷ್ಟು ವಿಪರ್ಯಾಸ.

"ಬೆಳಿಗ್ಗೆ ನಡೆದು ಬರುವಾಗ ವರವೆಂಬಂತೆ
ಸಣ್ಣ ಚಳಿ, ಎಳೆ ಬಿಸಿಲು
ಶಾಶ್ವತಿಯ ಮೈಯೆಲ್ಲ ಇಬ್ಬನಿಯ ರೊಮಾಂಚ
ಕಂಡರೆ ಉಂಟು ಎಷ್ಟೊಂದು ಬಣ್ಣಗಳ ಎಷ್ಟೊಂದು ಪುಟ್ಟ ಹಕ್ಕಿಗಳ
ಮರದ ಎಲೆಗಳ ನಡುವೆ ಹಗುರಾಗಿ, ಹಾಯಾಗಿ ಗುಟ್ಟಾಗಿ"[೮]

ಪ್ರೀತಿಯಿಂದ ನೋಡಿದರೆ ಪ್ರಕೃತಿಯು ಸಹ ನವಿಲಾಗಿ ಕಾಣುತ್ತದೆ. ಮನಸ್ಸಿನಲ್ಲಿ ಕಲ್ಮಷ ಇಟ್ಟುಕೊಂಡು ನೋಡಿದರೆ ಒಳ್ಳೆಯವರೆಲ್ಲರು ಕೆಟ್ಟವರಾಗಿ ಕಾಣುತ್ತಾರೆ. ಹಸಿರಾದ ಮರದ ಮೇಲೆ ಪುಟ್ಟಪುಟ್ಟ ಹಕ್ಕಿಗಳು, ಕುಳಿತು ಇಂಪಾದ ಧ್ವನಿಗೆಯ್ಯುತ್ತಿವೆ. ಕೇಳಲು ಮತ್ತು ನೋಡಲು ಅಷ್ಟೇ ಅಂದವಾಗಿ ಕಾಣುತ್ತಿದೆ.

"ತೋರುವಾಗುತ್ತಿರುವ ಈ ವಯಸ್ಕ
ಘನತೆಯಭಾರ ಕಳಬೆಟ್ಟು
ನಿನ್ನ ಈ ಪರಿಯ ಸೋಬಗಿಂದಾಗಿ
ಒಂದು ಕ್ಷಣ ಮೈಮರೆತೆ"[೯]

ಹೀಗೆ ಪ್ರೀತಿಯಿಂದ ನೊಡಿದರೆ ಎಲ್ಲವು ಚನ್ನಾಗಿ ಕಾಣುತ್ತದೆ. ವಯಸ್ಕ ತನ್ನ ಅಹಂನ್ನು ಕೇಳಗಿಟ್ಟು ಪ್ರೀತಿಯಿಂದ ನೊಡಿದರೆ ಮಾತ್ರ ಎಲ್ಲವರು ಪರಿಸರವು ಚನ್ನಾಗಿ ಕಾಣುತ್ತವೆ ಎಂದು ಅಭಿಪ್ರಾಯ.

**ಅಡಿಟಿಪ್ಪಣಿ**

೧. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ. ಪು – ೩೭
೨. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ ಪು – ೩೭

೩. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ ಪು – ೩೯

೪. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ ಪು – ೪೦

೫. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ ಪು – ೪೧

೬. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ ಪು – ೪೧

೭. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ ಪು – ೪೧

೮. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ ಪು – ೪೧

೯. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ ಪು – ೪೨





**ಡಾ. ಶಿವಗಂಗಾ ಯು. ಬಿಲಗುಂದಿ**
ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.**